ರಾಣೆಬೆನ್ನೂರು ಕಂದಾಯ ಉಪವಿಭಾಗ ರಚನೆ.

1607 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಣೆಬೆನ್ನೂರನ್ನು ಉಪ-ವಿಭಾಗ ಕೇಂದ್ರವನ್ನಾಗಿ ಮಾಡಲು ಸರ್ಕಾರವು ಕೂಡಲೇ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

1) ಸರ್ಕಾರವು ಸದ್ಯಕ್ಕೆ ಕಂದಾಯ ಉಪ-ವಿಭಾಗಗಳ ರಚನೆ ಕಾರ್ಯವನ್ನು ಕೈಗೆತ್ತಿಕೊಂಡಿರುವುದಿಲ್ಲ.

ಭೂಸಾರ ಸಂರಕ್ಷಣೆ ಇಲಾಖೆಯ ಕುರಿತು.

1608 - ಶ್ರೀ ಹೆಚ್. ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95, 95-96 ಹಾಗೂ 96-97 ರಲ್ಲಿ ಭೂಸಾರ ಸಂರಕ್ಷಣಾ ಇಲಾಖೆಯವರು ರಾಜ್ಯದಲ್ಲಿ ಎಷ್ಟು ಹಣ ವೆಚ್ಚ ಮಾಡಿರುತ್ತಾರೆ. (ಜಿಲ್ಲಾವಾರು ಅಂಕಿ ಅಂಶ ನೀಡುವುದು)

ಆ) ಮೇಲಿನ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ಭೂಸಾರ ಸಂರಕ್ಷಣಾ ಇಲಾಖೆಯವರು ಕೈಗೊಂಡ ಕಾಮಗಾರಿಗಳು ಯಾವಾವುದು ಹಾಗೂ ಅದಕ್ಕಾಗಿ ಮಾಡಿದ ವೆಚ್ಚವೆಷ್ಟು. (ತಾಲ್ಲೂಕುವಾರು ವಿವರ ನೀಡುವುದು).

ಇ) ಕೊಡಗು ಜಿಲ್ಲೆಯಲ್ಲಿ ಭೂಸಾರ ಸಂರಕ್ಷಣಾ ಇಲಾಖೆಯವರು ಕಳೆದ ಮೂರು ವರ್ಷಗಳಲ್ಲಿ ನಡೆಸಿರುವ ಕೆಲಸಗಳಲ್ಲಿ ಅವ್ಯವಹಾರ ನಡೆದು ಸರ್ಕಾರದ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. ಹಾಗಿದ್ದಲ್ಲಿ ಯಾವ ಯಾವ ಕಾಮಗಾರಿಗಳಲ್ಲಿ ಎಷ್ಟು ಹಣ ದುರುಪಯೋಗವಾಗಿರುತ್ತದೆ? (ವಿವರ ನೀಡುವುದು)

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ರಾಜ್ಯದಲ್ಲಿ ಕಳೆದ ಮೂರು ಸಾಲುಗಳಲ್ಲಿ ವಿವಿಧ ಭೂಸಾರ ಸಂರಕ್ಷಣಾ ಕಾರ್ಯಕ್ರಮಗಳಿಗಾಗಿ ವೆಚ್ಚ ಮಾಡಿದ ಹಣದ ವಿವರಗಳನ್ನು ಕೆಳಗೆ ನೀಡಲಾಗಿದೆ.

ಕ್ರ. ಸಂ.	ವರ್ಷ	ವೆಚ್ಚ ಮಾಡಿದ ಹಣ (ಲಕ್ಷ ರೂ.ಗಳಲ್ಲಿ)
1)	1994-95	8681.68
2)	1995-96	5457.45
3)	1996-97	5570.82

ಮೇಲ್ಕಂಡ ವೆಚ್ಚದ ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಆ) 1994-95,95-96 ಹಾಗೂ 96-97ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ವಿವಿಧ ಭೂಸಾರ ಸಂರಕ್ಷಣಾ ಕಾಮಗಾರಿಗಳಾಗ ಕೃಷಿ ಹೊಂಡಗಳು, ಕಿಂದ್ ಅಣೆ, ಸಂಕನ ಪಾಂಡ್, ಡಗ್‌ಔಟ್‌ಪಾಂಡ್ ತಡೆ ಅಣೆ, ತರುವು ಕಾಲುವೆ, ಕೃಷಿ ಭಾವಿ, ಕೊರಕಲು ದುರಸ್ತಿ ಇವೇ ಮುಂತಾದ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಈ ಕಾಮಗಾರಿಗಳ ಅನುಷ್ಠಾನಕ್ಕಾಗಿ 146.24 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಇವುಗಳ ತಾಲ್ಲೂಕುವಾರು ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಇ) ಹೌದು. ಕಳೆದ ಮೂರು ವರ್ಷಗಳಲ್ಲಿ ಐದು ಕೃಷಿ ಹೊಂಡಗಳ ಕಾಮಗಾರಿಗಳು ಅಪೂರ್ಣಗೊಂಡಿದ್ದು, ಇದರಿಂದ 62500.00 ರೂಗಳು ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇವುಗಳ ವಿವರಗಳನ್ನು ಅನುಬಂಧ-3 ರಲ್ಲಿ ನೀಡಲಾಗಿದೆ.

ಅನುಬಂಧ-1

1994-95, 95-96 ಮತ್ತು 96-97ನೇ ಸಾಲಿನಲ್ಲಿ ಜಿಲ್ಲಾವಾರು ಭೂಸಾರ ಸಂರಕ್ಷಣಾ ಕಾರ್ಯಕ್ರಮಗಳಿಗೆ ಖರ್ಚು ಮಾಡಲಾದ ಮೊತ್ತ

ಕ್ರಮ ಸಂಖ್ಯೆ	ಜಿಲ್ಲೆ	1994-95	1995-96	1996-97
		(ರೂ. ಲಕ್ಷಗಳಲ್ಲಿ)		
1)	ಬೆಂಗಳೂರು (ನಗರ)	118.81	81.48	83.20
2)	ಬೆಂಗಳೂರು (ಗ್ರಾಮಾಂತರ)	257.079	195.22	181.79
3)	ಕೋಲಾರ	406.463	196.18	279.17
4)	ತುಮಕೂರು	514.532	365.84	219.26
5)	ಮೈಸೂರು	419.457	312.42	297.63
6)	ಮಂಡ್ಯ	251.279	64.20	31.22
7)	ಕೊಡಗು	73.09	72.52	54.82
8)	ಹಾಸನ	339.327	321.52	301.21
9)	ಚಿಕ್ಕಮಗಳೂರು	168.02	252.86	296.66
10)	ದಕ್ಷಿಣ ಕನ್ನಡ	108.371	103.69	78.40
11)	ಶಿವಮೊಗ್ಗ	321.738	322.18	203.62
12)	ಚಿತ್ರದುರ್ಗ	789.648	481.15	468.22
13)	ಧಾರವಾಡ	1117.66	459.55	492.94
14)	ಉತ್ತರ ಕನ್ನಡ	653.778	188.38	267.62
15)	ಬೆಳಗಾಂ	557.64	211.06	286.49
16)	ಬಿಜಾಪುರ	552.725	284.15	526.70
17)	ಗುಲ್ಬರ್ಗಾ	970.30	571.01	475.62
18)	ಬೀದರ್	392.787	305.06	360.09
19)	ರಾಯಚೂರು	377.42	407.45	526.60
20)	ಬಳ್ಳಾರಿ	291.56	232.25	189.28
21)	ಕೇಂದ್ರ ಕಛೇರಿ	-	29.32	50.26
	ಒಟ್ಟು	**8681.68**	**5457.45**	**5570.82**

ಅನುಬಂಧ-2

ಮಾನ್ಯ ಶ್ರೀ ಹೆಚ್.ಡಿ. ಬಸವರಾಜು, ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.2109ಕ್ಕೆ ಉತ್ತರ. ಜಿಲ್ಲೆ-ಕೊಡಗು.

ಕ್ರ ಸಂ.	ವರ್ಷ	ತೆಗೆದುಕೊಂಡ ಕಾಮಗಾರಿಗಳು	ಮಡಿಕೇರಿ		ಸೋಮವಾರಪೇಟೆ		ವಿರಾಜಪೇಟೆ		ಒಟ್ಟು	
			ಸಂಖ್ಯೆ	ಖರ್ಚಾದ ಹಣ	ಸಂಖ್ಯೆ	ಖರ್ಚಾದ ಹಣ	ಸಂಖ್ಯೆ	ಖರ್ಚಾದ ಹಣ	ಸಂಖ್ಯೆ	ಖರ್ಚಾದ ಹಣ
1	2	3	4	5	6	7	8	9	10	11
1.	1994-95	ಕೃಷಿ ಹೊಂಡ	111	1206365	82	950245	83	895329	276	3051939
		ಕಿಂದಿಹಣೆ	30	959411	14	458194	20	444709	64	1862314
		ಸಂಕಪಾಂಡ್	19	57000	-		6	16000	25	75000
		ದಗ್‌ಔಟ್ ಪಾಂಡ್	2	18000	-	-	-	-	2	18000
		ತಡೆ ಅಣೆ	4	193799	4	90144	-	-	8	283943
		ತಿರುಗಾಲುವೆ	1	12247	-	-	-	-	1	12247
		ಕೃಷಿ ಬಾವಿ	37	229500	-	-	-	-	37	229500
		ಒಟ್ಟು	**204**	**2676322**	**100**	**1498583**	**109**	**1358038**	**213**	**5532943**
2.	1995-96	ಕೃಷಿ ಹೊಂಡ	137	1362485	39	554947	59	620296	235	2537728
		ಕಿಂಡಿಅಣೆ	23	639902	12	384483	34	1013461	69	2037846
		ಸಂಕನ್ ಪಾಂಡ್	1	2995	-	-	10	29800	11	32795

1	2	3	4	5	6	7	8	9	10	11
		ತಿರುಗಾಲುವೆ	5	59925	-	-	3	40000	11	32795
		ಕೃಷಿ ಬಾವಿ	7	49000	-	-	-	-	7	49000
		ದಗ್‌ಔಟ್ ಪಾಂಡ್	-	-	-	-	8	114700	8	114700
		ಒಟ್ಟು	**173**	**2114307**	**51**	**939430**	**114**	**1818247**	**338**	**4871994**
3.	1996-97	ಕೃಷಿ ಗೊಂಡ	87	961224	28	385988	84	942275	199	2289487
		ಕಿಂಡಿ ಅಣೆ	10	299192	6	270767	41	1256710	57	1626869
		ಕಿರಿಗಾಲುವೆ	-	-	-	-	1	24360	1	24360
		ಕೃಷಿ ಬಾವಿ	7	48992	-	-	-	-	7	48992
		ಕೊರಕಲು ದುರಸ್ತಿ	-	-	-	-	1	30000	1	30000
		ಒಟ್ಟು	**104**	**1309408**	**34**	**656755**	**127**	**2253345**	**265**	**4219508**

ಅನುಬಂಧ - 3

ದುರುಪಯೋಗಗೊಂಡ ಕಾಮಗಾರಿಗಳ ವಿವರ - 1994-95, ಸೋಮವಾರಪೇಟೆ.

ಕ್ರಮ ಸಂಖ್ಯೆ	ಕೆಲಸಗಳು	ಹಳ್ಳಿ	ಫಲಾನುಭವಿ	ಕ್ಷೇತ್ರ ಸಂಖ್ಯೆ	ಮೊತ್ತ ರೂ.
1)	ಕೃಷಿ ಕೊಂಡ	ದೊಡ್ಡಮಳತೆ	ಶ್ರೀ ಲಿಂಗರಾಜು	ತಾಕು ನಂ.5	12500-00
2)	ಕೃಷಿ ಹೊಂಡ	ಕಾಸಬೈಲು	ಶ್ರೀ ಎ.ಎ.ಬಿಡ್ಡಪ್ಪ	"	12500-00
3)	ಕೃಷಿ ಹೊಂಡ	ಬೇರಲ ಶ್ರೀಮಂಗಲ	ಶ್ರೀ ಎಂ.ಎಂ. ಚಂಗಪ್ಪ	" 1	12500-00
4)	ಕೃಷಿ ಹೊಂಡ	ತಳ್ತರ ಶೆಟ್ಟಿಹಳ್ಳಿ	ಶ್ರೀ ಕೆ.ವಿ.ರುದ್ರಪ್ಪ	" 10	12500-00
5)	ಕೃಷಿ ಹೊಂಡ	ಹೊಸಕೋಟೆ	ಶ್ರೀ ಹೆಚ್.ಕರಿಯ	" 2	12500-00
				ಒಟ್ಟು ರೂ.	**62500-00**

ವಸತಿ ಹೀನರಿಗೆ ನಿವೇಶನ.

1609 - ಶ್ರೀ ಹೆಚ್. ಡಿ. ಬಸವರಾಜ್ (ವೀರಾಜಪೇಟೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರ??

ಅ) ಸರ್ಕಾರವು ನಡೆಸಿದ ನಿವೇಶನ ರಹಿತರ ಮತ್ತು ಮನೆ ರಹಿತರ ಸಮೀಕ್ಷೆ ಪ್ರಕಾರ ರಾಜ್ಯದಲ್ಲಿ ಎಷ್ಟು ಮಂದಿ ನಿವೇಶನ ರಹಿತ ಮತ್ತು ಮನೆ ರಹಿತರಿದ್ದಾರೆ? (ಜಿಲ್ಲಾವಾರು ಅಂಕಿಅಂಶ ನೀಡುವುದು)

ಆ) ನಿವೇಶನ ರಹಿತರಿಗೆ ಮತ್ತು ಮನೆ ರಹಿತರಿಗೆ ಸರ್ಕಾರ ನಿವೇಶನ ಹಾಗೂ ಮನೆ ಒದಗಿಸಲು ಹಾಕಿಕೊಂಡಿರುವ ಕಾರ್ಯಕ್ರಮವೇನು?

ಇ) ಎಷ್ಟು ವರ್ಷಗಳಲ್ಲಿ ಎಲ್ಲಾ ನಿವೇಶನ ರಹಿತರಿಗೆ ಮತ್ತು ಮನೆ ರಹಿತರಿಗೆ ನಿವೇಶನ ಮತ್ತು ಮನೆ ಒದಗಿಸಲಾಗುತ್ತದೆ ಹಾಗೂ ಎಷ್ಟು ಹಣ ಈ ಕಾರ್ಯಕ್ರಮಕ್ಕಾಗಿ ವೆಚ್ಚ ಮಾಡಲಿದೆ?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) 1995ರ ಮಾರ್ಚಿ ತಿಂಗಳಲ್ಲಿ ನಡೆಸಿದ ಸರ್ವೇಕ್ಷಣೆ ಪ್ರಕಾರ ರಾಜ್ಯದಲ್ಲಿ 11,52,188 ನಿವೇಶನ ರಹಿತರು ಮತ್ತು 7,81,816 ಮನೆ ರಹಿತರು ಹೀಗೆ ಒಟ್ಟು 19,34,004 ಮಂದಿ ನಿವೇಶನ ಮತ್ತು ಮನೆ ರಹಿತರಿರುತ್ತಾರೆ (ಜಿಲ್ಲಾವಾರು ವಿವರ ಅನುಬಂಧ-1 ರಲ್ಲಿದೆ)